144 ನೇ ಅಧಿವೇಶನ
ನಿ-72
ಕ್ರ-180 ಕಂಪ್ಯೂಟರ್ ಶಾಖೆ

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕಾಂತರಾಜ್ (ಬಿಎಂಎಲ್) ಇವರು ನಿಯಮ 72 ರಡಿ ಗಮನ ಸೆಳೆಯುವ ಸೂಚನೆ.**

## ವಿಷಯ

ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಸಂಖ್ಯೆ: ಕಾನಿ/ಕ.ಪ.ಪ್ರಾ/ನೇಮಕಾತಿ/337/2020, ದಿನಾಂಕ: 14.02.2020 ರಂತೆ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಆಯ್ಕೆ ಪ್ರಾಧಿಕಾರವನ್ನಾಗಿ ಮಾಡಲಾಗಿದೆ. ಕಡ್ಡಾಯ ಆಂಗ್ಲ ಪತ್ರಿಕೆಯಲ್ಲಿ ಕೀ–ಉತ್ತರಗಳನ್ನು ಪ್ರಕಟಿಸಲಾಗಿದ್ದು, ಅದರಲ್ಲಿರುವ ಉತ್ತರವನ್ನೇ ಬರೆದಿದ್ದು answer Script: 184552CF–Paper-II (English) ಶೂನ್ಯ ಅಂಕ ನೀಡಿದ್ದು, ಇದೇ ಉತ್ತರ ಬರೆದಿರುವ answer Script: A8436ED 6- Paper-II (English) ಗೆ ಒಂದು ಅಂಕ ನೀಡಿರುವುದು ನ್ಯಾಯಕ್ಕೆ ವಿರುದ್ಧವಾಗಿದ್ದು, ಈ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು WP No 106384 ರ ದಿನಾಂಕ: 07.01.2020ರ ಆದೇಶದಲ್ಲಿ ಸದರಿ ಪ್ರಶ್ನೆಯ ಉತ್ತರವನ್ನು ಮರುಮೌಲ್ಯ ಮಾಪನ ಮಾಡಿ ಅದರಂತೆ ಕ್ರಮವಹಿಸಲು ಆದೇಶ ನೀಡಿದ್ದರೂ ಕೂಡಾ ಅಧಿಕಾರಿಗಳು ಯವುದೇ ಕ್ರಮವಹಿಸಿದೆ, ಒಂದೇ ಪ್ರಶ್ನೆಯ ಒಂದೇ ಉತ್ತರಕ್ಕೆ ಒಂದು ಉತ್ತರ ಪತ್ರಿಕೆಗೆ ಅಂಕ ನೀಡಿ ಮತ್ತೊಂದು ಉತ್ತರ ಪತ್ರಿಕೆಗೆ ಅಂಕ ನೀಡದಿರುವುದರ ಕುರಿತು ಸಂಬಂಧಿಸಿದಂತ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಅಭ್ಯರ್ಥಿಗಳಿಗೆ ನ್ಯಾಯ ಒದಗಿಸುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

## ಉತ್ತರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ವಿವಿಧ ವಿಷಯಗಳಿಗೆ ಒಟ್ಟು 2160 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿ ಅಧಿಸೂಚನೆ ಸಂಖ್ಯೆ ಇಆ/ಏಇಂ/ಂಆಒಓ/ಅಖ– 55/2014–15 ದಿನಾಂಕ 22.01.2015 ರಂದು ಹೊರಡಿಸಲಾಗಿತ್ತು. 2160 ಹುದ್ದೆಗಳಲ್ಲಿ ಕನ್ನಡ ವಿಷಯಕ್ಕೆ 323 ಹುದ್ದೆಗಳನ್ನು ಹಂಚಿಕೆ ಮಾಡಲಾಗಿತ್ತು. ಸದರಿ ಹುದ್ದೆಗಳಿಗೆ ಅಂತಿಮ ಆಯ್ಕೆಪಟ್ಟಿಯನ್ನು ದಿನಾಂಕ 02–01–2017ರಂದು ಪ್ರಕಟಿಸಿರುತ್ತಾರೆ.

ಶ್ರೀ ದಾವಲಮಲೀಕ್ ಸಾಬ ಟಕ್ಕಳಕಿ ಇವರು ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಕನ್ನಡ ವಿಷಯಕ್ಕೆ ಅರ್ಜಿ ಸಲ್ಲಿಸಿದ್ದು ಆನ್ ಲೈನ್ ಅರ್ಜಿಯಲ್ಲಿ 2ಬಿ/ಗ್ರಾಮೀಣ/ಕ.ಮಾ.ಅ ಮೀಸಲಾತಿಗಳನ್ನು ಕೋರಿರುತ್ತಾರೆ ಹಾಗೂ ಲಿಖಿತ ಪರೀಕ್ಷೆಯಲ್ಲಿ ಕನ್ನಡ ಕಡ್ಡಾಯ ಪತ್ರಿಕೆಯಲ್ಲಿ 100 ಅಂಕಗಳಿಗೆ 54 ಅಂಕಗಳನ್ನು, ಇಂಗ್ಲೀಷ್ ಕಡ್ಡಾಯ ಪತ್ರಿಕೆಯಲ್ಲಿ 100 ಅಂಕಗಳಿಗೆ 29 ಅಂಕಗಳನ್ನು ಮತ್ತು ನಿರ್ದಿಷ್ಟ ಪತ್ರಿಕೆಯಲ್ಲಿ ಒಟ್ಟು 300 ಅಂಕಗಳಿಗೆ 199 ಅಂಕಗಳನ್ನು ಗಳಿಸಿರುತ್ತಾರೆ.

ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ವಿಶೇಷ ನೇಮಕಾತಿ ನಿಯಮ 2014 ರಲ್ಲಿ ನಿಯಮ 7 ರಲ್ಲಿ ತಿಳಿಸಿರುವಂತೆ ಕಡ್ಡಾಯ ಕನ್ನಡ ಮತ್ತು ಇಂಗ್ಲೀಷ್ ಪತ್ರಿಕೆಯಲ್ಲಿ ಕನಿಷ್ಠ 30% ಅಂಗಳನ್ನು ಗಳಿಸಿರತಕ್ಕದ್ದು. ಆದರೆ ಶ್ರೀ ದಾವಲಮಲೀಕ್ ಸಾಬ ಟಕ್ಕಳಕಿ ಇವರು ಕಡ್ಡಾಯ ಇಂಗ್ಲೀಷ್ ಪರೀಕ್ಷೆಯಲ್ಲಿ 29 ಅಂಕಗಳನ್ನು ಗಳಿಸಿರುವುದರಿಂದ ಇವರು ಆಯ್ಕೆಗೆ ಅರ್ಹರಿರುವುದಿಲ್ಲ.

ಶ್ರೀ ದಾವಲಮಲೀಕ್ ಸಾಬ ಟಕ್ಕಳಕಿ ಇವರನ್ನು ಆಯ್ಕೆಗೆ ಪರಿಗಣಿಸದ ಕಾರಣ ಇವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ 7294/2016 ಮೂಲಕ ದಾವೆ ಹೂಡಿದ್ದು ಮಾನ್ಯ ಆಡಳಿತ ನ್ಯಾಯಮಂಡಳಿಯು ದಿನಾಂಕ 26.08.2016 ರಂದು ಇವರ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿರುತ್ತದೆ. ಶ್ರೀ ದಾವಲಮಲೀಕ್ ಸಾಬ ಟಕ್ಕಳಕಿ ಇವರು ನ್ಯಾಯಮಂಡಳಿಯ ಆದೇಶವನ್ನು ಪ್ರಶ್ನಿಸಿ ಪರಿಶೀಲನಾ ಅರ್ಜಿ ಸಂಖ್ಯೆ: 67/2017 ಅನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಲಯವು ದಿನಾಂಕ 03.03.2017 ರಂದು ಸದರಿ ಅರ್ಜಿಯನ್ನು ತಿರಸ್ಕರಿಸಿರುತ್ತದೆ.

ಶ್ರೀ ದಾವಲಮಲೀಕ್ ಸಾಬ ಟಕ್ಕಳಕಿ ಇವರು ಆಡಳಿತ ನ್ಯಾಯಮಂಡಳಿಯ ಆದೇಶಗಳನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:106384/2018 ಮೂಲಕ ದಾವೆ ಹೂಡಿದ್ದು,ಸಹಾಯಕ ಪ್ರಾಧ್ಯಾಪಕರ ಕನ್ನಡ ವಿಷಯದ ಅಭ್ಯರ್ಥಿ ಶ್ರೀ ದಾವಲಮಲೀಕ್ ಸಾಬ ಟಕ್ಕಳಕಿ ಇವರ ಕಡ್ಡಾಯ ಇಂಗ್ಲೀಷ್ ವಿಷಯದ ಪತ್ರಿಕೆ-2 ರ ಪ್ರಶ್ನೆ ಸಂಖ್ಯೆ 13 ರ ಉಪ ಪ್ರಶ್ನೆ ಸಂಖ್ಯೆ ಜಿ-ಯನ್ನು ಸಕ್ಷಮ ಪ್ರಾಧಿಕಾರಗಳ ಮೂಲಕ, ಮರು ಮೌಲ್ಯಮಾಪನ ಮಾಡಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಅಂಕಗಳ ಪ್ರಕಾರ, ಅಭ್ಯರ್ಥಿಯು ಆಯ್ಕೆ ಹಂತಕ್ಕೆ ಬಂದಲ್ಲಿ ಮೂರು ತಿಂಗಳ ಅವಧಿಯೊಳಗೆ ಆಯ್ಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸುವಂತೆ ಆದೇಶಿಸಲಾಗಿರುತ್ತದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ ಪ್ರಾಧಿಕಾರವು ತಜ್ಞರ ಸಮಿತಿಯನ್ನು ರಚಿಸಿ ಮರುಮೌಲ್ಯಮಾಪನ ಮಾಡಲು ತಿಳಿಸಲಾಗಿತ್ತು. ಕಡ್ಡಾಯ ಇಂಗ್ಲೀಷ್ ವಿಷಯದ ಪತ್ರಿಕೆಗೆ-2ರ ಪ್ರಶ್ನೆ ಸಂಖ್ಯೆ 13ರ ಉಪ ಪ್ರಶ್ನೆ ಸಂಖ್ಯೆ ಜಿ-ಗೆ ಅಭ್ಯರ್ಥಿಯು ಬರೆದಿರುವ ಉತ್ತರವು ಸರಿ ಇಲ್ಲವೆಂದು ಮೌಲ್ಯಮಾಪಕರು ಸದರಿ ಪ್ರಶ್ನೆಗೆ ಶೂನ್ಯ ಅಂಕವನ್ನು ನೀಡಿರುವುದು ಸರಿಯಿದೆ ಎಂದು ವರದಿ ನೀಡಿರುತ್ತಾರೆ. ಮೌಲ್ಯಮಾಪಕರು ಸದರಿ ಪ್ರಶ್ನೆಗೆ ಅಂಕಗಳನ್ನು ನೀಡಿರುವುದಿಲ್ಲ. ಆದ್ದರಿಂದ ಮೌಲ್ಯಮಾಪಕರು ಸದರಿ ಪ್ರಶ್ನೆಗೆ ಶೂನ್ಯ ಅಂಕವನ್ನು ನೀಡಿರುವುದು ಸರಿಯಿದೆ ಎಂದು ತಜ್ಞರ ಸಮಿತಿಯು ವರದಿ ನೀಡಿರುತ್ತಾರೆ.

ತಜ್ಞರ ಸಮಿತಿಯು ನೀಡಲಾದ ವರದಿಯ ಹಿನ್ನಲೆಯಲ್ಲಿ ಪ್ರಾಧಿಕಾರವು ದಿನಾಂಕ 14.02.2020 ರಂದು ವಿಷಯ ತಜ್ಞರು ನೀಡಿರುವ ವರದಿಯನ್ನು ಲಗತ್ತಿಸಿ ಶ್ರೀ ದಾವಲಮಲೀಕ್ ಸಾಬ ಟಕ್ಕಳಕಿ ಇವರಿಗೆ ಹಿಂಬರಹ ನೀಡಲಾಗಿರುತ್ತದೆ.

**ಇಡಿ 214 ಡಿಸಿಇ2021**

(ಡಾ॥ ಅಶ್ವಥ್ ನಾರಾಯಣ ಸಿ.ಎನ್.)
**ಉನ್ನತ ಶಿಕ್ಷಣ ಸಚಿವರು, ಐ.ಟಿ.-ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು**